

ವಿಷಾದದಿಂದ ಆರಾಮಕುರ್ಚಿಯ ಮೇಲೆ ಕೂರುವಾಗ ಅವನು, 'ರೊಸಾಲಿಯ, ಎಂಥ ಬದುಕು ಇದು! ಎಂಥ ಬದುಕು ಅನ್ನುತ್ತೇನೆ. ನಮ್ಮದೇ ವಸ್ತುಗಳನ್ನು ಕೂಡಾ ನಾವು ಬಿಸಾಡುವ ಹಾಗಿಲ್ಲ' ಎಂದು ಉದ್ಗರಿಸಿದ.

ಯಾವೊನಿಗೆ ಸಂಕಟವಾಗಿತ್ತು. ಉಸುರು ಕಟ್ಟಿದ ಹಾಗಾಗಿತ್ತು.

'ಗಮನಿಸಿದ್ದೀಯ ರೊಸಾಲಿಯ, ಜನರು ಹಳೆಯ ವಸ್ತುಗಳನ್ನು ಯಾಕೆ ಬಿಸಾಡುವುದಿಲ್ಲ ಎಂದು? ಯಾಕೆ ಅದಕ್ಕೆ ಜೋತು ಬೀಳುತ್ತಾರೆಂದು?'

'ಬರೀ ಹಳೆಯ ವಸ್ತುಗಳನ್ನಲ್ಲ, ಹಳೆಯ ವಿಚಾರಗಳನ್ನು ಕೂಡಾ' ಎಂದು ಉತ್ತರಿಸಿದಳು ರೊಸಾಲಿಯ.

ಡಾಲಿ ಪಿಯಾನೊ ಇದ್ದ ಜಾಗವನ್ನು ಮೂಸಿ ನೋಡುತ್ತಿತ್ತು. ಒಂದಷ್ಟು ಅತ್ತು ಅದು ಅಲ್ಲಿಯೇ ಮಲಗಿ ನಿದ್ರೆ ಹೋಯಿತು.

ಮತ್ತೆ ಕರೆಗಂಟೆಯ ಸದ್ದಾಯಿತು. ವ್ಯಕ್ತಿಯೊಬ್ಬ ಒಳಗೆ ಬಂದು ತನ್ನ ಚರ್ಮದ ಚೀಲದಿಂದ ಕೆಲವು ಕಾಗದಪತ್ರಗಳನ್ನು ಹೊರಗೆ ತೆಗೆದ. ತಾನು ಬಂದರು ಅಧಿಕಾರಿಯ ಕಚೇರಿಯಿಂದ ಬಂದಿರುವುದಾಗಿ ಹೇಳಿದ.

'ನೀವು ಯಾವೊ ದೆ ಒಲಿವೈರಾ ಅಲ್ಲವೇ?'

'ಹೌದು, ನಾನೇ ಯಾವೊ ದೆ ಒಲಿವೈರಾ.'

'ಇಂದು ಬೆಳಗ್ಗೆ ನೀವು ಸಮುದ್ರಕ್ಕೆ ಏನನ್ನು ಬಿಸಾಡಿದಿರಿ?' ಒಲಿವೈರಾ ಸ್ತಬ್ಧನಾದ.

'ಇಲ್ಲಿ ಇರುವುದು ಬಂದರಲ್ಲ ಸ್ವಾಮೀ, ಅದು ಸಮುದ್ರ.'

'ನೀವು ನನಗೆ ನಿಘಂಟಿನ ಅರ್ಥ ಹೇಳುವುದು ಬೇಡ ಮಿ. ಒಲಿವೈರಾ.'

ಆ ವ್ಯಕ್ತಿ ತನ್ನ ಪ್ರಶ್ನೆಯನ್ನು ಪುನಃ ಉಚ್ಚರಿಸಿದ. ಮತ್ತು ಯಾವುದೇ ವಸ್ತುವನ್ನು ಸಮುದ್ರದೊಳಗೆ ಅಥವಾ ಸಮುದ್ರದ ಮೇಲೆ ಪರವಾನಗಿ ಇಲ್ಲದೆ ಬಿಸಾಡುವುದಕ್ಕೆ ನಿಷೇಧವಿದೆ ಎಂದು ವಿವರಿಸಿದ.

'ನಿಮ್ಮ ಬಳಿ ಪರವಾನಗಿ ಇದೆಯೇ?' ಒಲಿವೈರಾ ವಿನಯದಿಂದ ತಾನು ಮಾಡಿದ್ದು ಅಪರಾಧವೇ ಎಂದು ಕೇಳಿದ.

'ಪ್ರಶ್ನೆ ಅದಲ್ಲ. ನಾವೀಗ ಯುದ್ಧ ಕಾಲದಲ್ಲಿದ್ದೇವೆ ಎಂದು ನಿಮಗೆ ತಿಳಿಯದೇ? ನಮ್ಮ ಸಮುದ್ರದ ಗಡಿಗಳನ್ನು ಕಾಯುವುದು ಬೇಡವೇ? ಈ ನಾಜಿಗಳು ಒಂದೊಂದು ಅವಕಾಶಕ್ಕೂ ಕಾದು ನಿಂತಿದ್ದಾರೆ.'

'ಆದರೆ, ಅದೊಂದು ಸಾಮಾನ್ಯ ಪಿಯಾನೊ, ಸರ್.'

'ಆದರೂ ಅದು ಕಾನೂನುಭಂಗ. ಏನೇ ಇರಲಿ, ಅದು ನಿಜವಾಗಿಯೂ ಪಿಯಾನೊ ತಾನೇ? ಖಂಡಿತವಾಗಿ?'

'ಖಂಡಿತ' ಎಂದು ಯಾವೊ ಚೀರಿ ಹೇಳಿದ. ಮತ್ತೆ